# ವಯಸ್ಸು 20 ವಿಶ್ವದಾಖಲೆ ಒಂಬತ್ತು

■ ಗಣೇಶ ಚಂದನಶಿವ

ಯುವತಿ ಕಪ್ಪು ಹಲಗೆಯಲ್ಲಿ ಏಕಕಾಲಕ್ಕೆ ಎರಡೂ ಕೈಯಿಂದ ಬರೆಯುತ್ತಿದ್ದಳು. ಅಲ್ಲಿದ್ದ ಮಕ್ಕಳೂ ಅವರನ್ನು ಅನುಕರಿಸುತ್ತಿದ್ದರು. ಯುನಿ ಡೈರೆಕ್ಷನ್, ಅಪೋಸಿಟ್ ಡೈರೆಕ್ಷನ್, ಮಿರರ್ ವ್ಯೂ... ಹೀಗೆ ಸಾಗಿತ್ತು.

ಮಂಗಳೂರಿನ ಆದಿ ಸ್ವರೂಪರಿಗೆ ಏಕಕಾಲಕ್ಕೆ ಎರಡೂ ಕೈಗಳಿಂದ ಬರೆಯುವುದು ಎಂದರೆ ಅಚ್ಚುಮೆಚ್ಚು. ಹತ್ತು ವಿಭಿನ್ನ ಶೈಲಿಯಲ್ಲಿ ಬರೆಯುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಇಂತಹ ವಿಶಿಷ್ಟ ಪರಿಣತಿಯ ಕಾರಣಕ್ಕೆ ಒಂಬತ್ತು ವಿಶ್ವದಾಖಲೆಗಳ ಗರಿಗಳು ಅವರ ಕಿರೀಟವನ್ನೇರಿವೆ.

ಏಕಕಾಲಕ್ಕೆ ಎರಡೂ ಕೈಗಳಿಂದ ಒಂದು ನಿಮಿಷಕ್ಕೆ 45 ಪದಗಳಂತೆ ಯುನಿಡೈರೆಕ್ಷನಲ್ ವಿಭಾಗದ ಶೈಲಿಯಲ್ಲಿ ಇಂಗ್ಲಿಷ್ ಪದಗಳನ್ನು ಬರೆಯುವ ಸಾಧನೆಗಾಗಿ ಉತ್ತರ ಪ್ರದೇಶದ ಬರೇಲಿಯಾ ಲಾಟಾ ಫೌಂಡೇಷನ್, ಎಕ್ಸ್‌ಕ್ಲೂಸಿವ್ ವರ್ಲ್ಡ್ ರೆಕಾರ್ಡ್ ನೀಡಿದೆ.

ಹಲವು ವಿಶ್ವ ದಾಖಲೆ ಬರೆದ ಆದಿ ಸ್ವರೂಪರಿಗೆ ಈಗಿನ್ನೂ 20 ವರ್ಷ ವಯಸ್ಸು. ಅವರು ಶಾಲೆಗೆ ಹೋಗಿ ಕಲಿತಿದ್ದೇ ಇಲ್ಲ! ಮಂಗಳೂರಿನ ಸ್ವರೂಪ ಅಧ್ಯಯನ ಕೇಂದ್ರವು ಗೋಪಾಡ್ಕರ್, ಸುಮಾಡ್ಕರ್ ದಂಪತಿ ಕಟ್ಟಿದ ಸಂಸ್ಥೆ. ಮಗಳಿಗೆ ಸಾಂಪ್ರದಾಯಿಕ ಶಿಕ್ಷಣ ಕೊಡಿಸದೇ ಅವರ ಸಂಸ್ಥೆಯಲ್ಲಿ ಅನೌಪಚಾರಿಕ ಶಿಕ್ಷಣ ನೀಡಿದ್ದಾರೆ.

‘ಇದು ಅದಲ್ಲ’ ಎಂಬುದು ಸ್ವರೂಪ ಅಧ್ಯಯನ ಕೇಂದ್ರದ ಘೋಷವಾಕ್ಯ. ಪಠ್ಯಕ್ಕಿಂತ ಅನುಭವ ಶಿಕ್ಷಣಕ್ಕೆ ಇಲ್ಲಿ ಹೆಚ್ಚು ಒತ್ತು. ನಲಿಯುತ್ತ ಕಲಿಯುವ ಸ್ವ–ಅಧ್ಯಯನ ಶಿಕ್ಷಣ ಪದ್ಧತಿ ಇದಾಗಿದೆ. ಆಟ–ನೃತ್ಯ–ಚಿತ್ರಕಲೆ–ಸಂಗೀತ ಹೀಗೆ ಪ್ರತಿಯೊಂದರಲ್ಲಿ ತೊಡಗಿ ಆ ಮೂಲಕ ಕಲಿಯುವುದು ಇಲ್ಲಿಯ ವಿಶೇಷತೆ. ನಿತ್ಯ ಯೋಗ, ಧ್ಯಾನ, ಸಂಗೀತ, ಸಾಹಿತ್ಯ, ಸೃಜನಾತ್ಮಕ ಕಲೆ, ಫೈನ್ ಆರ್ಟ್, ಕ್ರಾಫ್ಟ್, ಮೆಂಟಲ್ ಎಬಿಲಿಟಿ, ವಿಜ್ಞಾನ ಪ್ರಯೋಗಾಲಯದಲ್ಲೇ ಅಧ್ಯಯನ... ಹೀಗೆ ವಿಭಿನ್ನವಾಗಿ ತರಬೇತಿ ನೀಡಲಾಗುತ್ತದೆ.

ಖಾಸಗಿಯಾಗಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 92ರಷ್ಟು ಅಂಕ ಪಡೆದು ಪಾಸಾಗಿದ್ದಾರೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಮೂಲಕ ಪಿಯುಸಿ ಪೂರ್ಣಗೊಳಿಸಿದ್ದಾರೆ.

ಆದಿ 10ನೇ ವಯಸ್ಸಿನಲ್ಲಿ ‘ಆದಿಯ ಕಥೆ; ಅಂತ್ಯ ನೀವೇ ಹೇಳಿ’ ಎಂಬ ಪುಸ್ತಕ ಬರೆದರು. ತಾವು ಬರೆದ ಪುಸ್ತಕಕ್ಕೆ ಚಿತ್ರ ಬಿಡಿಸಿ, ಏಕವ್ಯಕ್ತಿ ಚಿತ್ರ ಪ್ರದರ್ಶನವನ್ನೂ ಆಯೋಜಿಸಿದ್ದರು. ‘ಮಕ್ಕಳ ಜಗಲಿ’ ಎಂಬ ಆನ್‌ಲೈನ್ ಪತ್ರಿಕೆಯಲ್ಲಿ ‘ಆದಿಯ ಚಿತ್ರಪತ್ರ’ ಅಂಕಣ ಬರೆಯುತ್ತಿದ್ದಾರೆ.

ಹಿಂದೂಸ್ತಾನಿ ಸಂಗೀತ, ಯಕ್ಷಗಾನ, ಭರತನಾಟ್ಯ, ವಯೊಲಿನ್ ಕಲಿಯುತ್ತಿದ್ದಾರೆ. ಕನ್ನಡ, ಇಂಗ್ಲಿಷ್, ತುಳು ಮಾತನಾಡುವುದಷ್ಟೇ ಅಲ್ಲ, ವಿಭಿನ್ನ ಶೈಲಿಯಲ್ಲಿ ಎರಡೂ ಕೈಗಳಿಂದ ಏಕಕಾಲಕ್ಕೆ ಬರೆಯುತ್ತಾರೆ. ಈಗ ‘ಸ್ವರೂಪ ಅಧ್ಯಯನ ಕೇಂದ್ರ’ದಲ್ಲಿ ಸ್ವರೂಪ ಸಾಧನ ಬಳಗಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಚಪ್ಪಾಳೆ ಭಾಷೆ, ಕಣ್ಣಿನ ಭಾಷೆ, ತುರಿಕೆ ಭಾಷೆ, ನೃತ್ಯ ಭಾಷೆ ಹೀಗೆ 40 ಸಂಕೇತ ಭಾಷೆಗಳನ್ನು ಇವರು ಕಲಿತಿದ್ದು, ಅದನ್ನು ಮಕ್ಕಳಿಗೆ ಕಲಿಸುತ್ತಿದ್ದಾರೆ.

‘ಒಂದೂವರೆ ವರ್ಷದ ಮಗುವಾಗಿರುವಾಗಲೇ ಓದಲು ಆರಂಭಿಸಿದ ಆದಿ ಸ್ವರೂಪ, ಎರಡೂವರೆ ವರ್ಷಕ್ಕೆ ಬರೆಯುತ್ತಿದ್ದಳು. ಆಕೆ ಕಲಿಕೆಗೆ ಮಾದರಿಯಾಗಬೇಕು ಎಂಬುದು ನಮ್ಮ ಕನಸಾಗಿತ್ತು. ಹಾಗೆ ಆಕೆಯನ್ನು ಸಿದ್ಧ ಮಾಡಿದ್ದೇವೆ. ಒತ್ತಡ ಇಲ್ಲದ, ಕ್ಲಾಸ್ ರೂಮ್‌ನ ರೆಡಿಮೇಡ್ ಶಿಕ್ಷಣ ಇಲ್ಲದೇ ಬದಲಾವಣೆ ಕಂಡುಕೊಂಡಿದ್ದಾಳೆ. ಚಿತ್ರಕಲೆ ಕಲಿಯುವ ಮೂಲಕ ತಾಳ್ಮೆ ಸೃಷ್ಟಿಸಿಕೊಂಡಿದ್ದಾಳೆ. ಆಕೆಯಲ್ಲಿ ಕಲಿಕೆಯ ಹಂಬಲ ಹೆಚ್ಚಾಗಿದೆ. ಆಕೆಗೆ ಅಷ್ಟ ದಶಾವಧಾನವೂ ಗೊತ್ತು’ ಎಂದು ಆದಿ ಸ್ವರೂಪ ಅವರ ತಂದೆ ಗೋಪಾಡ್ಕರ್ ಹೆಮ್ಮೆಪಡುತ್ತಾರೆ.




‘2019ರಲ್ಲಿ ನಿಮಿಷಕ್ಕೆ ಎರಡೂ ಕೈಯಿಂದ 45 ಪದ ಬರೆಯುವ ಮೂಲಕ ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದೆ. 2020ರಲ್ಲಿ 10ನೇ ತರಗತಿಯ ಪಠ್ಯವನ್ನು ಚಿತ್ರದಲ್ಲಿ ಬಿಡಿಸುವ ಮೂಲಕ ದಾಖಲೆ ಬರೆದೆ. 2021ರಲ್ಲಿ ಎರಡೂ ಕೈಯಿಂದ 60 ಪದ ಬರೆದಿದ್ದು ಮತ್ತೊಂದು ದಾಖಲೆಯಾಯಿತು. 2022ರಲ್ಲಿ ಮಿರರ್ ವ್ಯೂ ವಿಭಾಗದಲ್ಲಿ ಇದ್ದ ನಿಮಿಷಕ್ಕೆ 36 ಪದ ಬರೆಯುವ ದಾಖಲೆಯನ್ನು ಮುರಿದೆ’ ಎಂದು ತಮ್ಮ ಸಾಧನೆಯನ್ನು ಮೆಲುಕು ಹಾಕುತ್ತಾರೆ ಆದಿ ಸ್ವರೂಪ.

### ಚಿತ್ರರೂಪಕ್ಕಿಳಿದ ಪಠ್ಯ

ಎಸ್ಸೆಸ್ಸೆಲ್ಸಿಯ ಸಂಪೂರ್ಣ ಪಠ್ಯವನ್ನು ಚಿತ್ರರೂಪಕ್ಕಿಳಿಸಿದ್ದು ಆದಿ ಸ್ವರೂಪ ಅವರ ಇನ್ನೊಂದು ಸಾಧನೆ. ಇದು ‘ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ ದಾಖಲಾಗಿದೆ.

‘ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಬಾಹ್ಯ ವಿದ್ಯಾರ್ಥಿಯಾಗಿ ತೆಗೆದುಕೊಂಡಿದ್ದೆ. ಎಸ್ಸೆಸ್ಸೆಲ್ಸಿಯ ಆರು ವಿಷಯಗಳನ್ನು ಕೇವಲ ಎ 4 ಗಾತ್ರದ ಎಂಟು ಹಾಳೆಗಳಲ್ಲಿ ಅಡಕ ಮಾಡಿದೆ. ಒಟ್ಟಾರೆ ಎಂಟು ಚಿತ್ರಗಳನ್ನು ಬಿಡಿಸಿದ್ದು, ಅದರಲ್ಲಿ ಸುಮಾರು 93 ಸಾವಿರ ಸಣ್ಣ ಚಿತ್ರಗಳು ಅಡಕವಾಗಿವೆ. ಈ ಚಿತ್ರಗಳು ಆರು ವಿಷಯಗಳ ಪಠ್ಯವನ್ನು ಪ್ರತಿನಿಧಿಸುತ್ತವೆ’ ಎನ್ನುತ್ತಾರೆ ಆದಿ ಸ್ವರೂಪ.

‘ಈ ಚಿತ್ರಗಳನ್ನು ಬಿಡಿಸುವ ಮೊದಲು ಪಠ್ಯವನ್ನು ಓದಿ, ಅವುಗಳಿಗೆ ಚಿತ್ರದ ರೂಪ ನೀಡಿದೆ. ನಂತರ ಅವುಗಳನ್ನು ದೊಡ್ಡ ಕ್ಯಾನ್ವಾಸ್‌ನಲ್ಲಿ ಬರೆದಿದ್ದು, ಜ್ಞಾಪಕ ಇಟ್ಟುಕೊಳ್ಳುವ ಹತ್ತು ತಂತ್ರಗಳಲ್ಲಿ ವಿಶುವಲ್ ಆರ್ಟ್ ಕೂಡ ಒಂದು. ಸ್ಮರಣ ಶಕ್ತಿ, ಮೆದುಳು ಚುರುಕಿಗೆ ಚಿತ್ರಗಳು ಸಹಕಾರಿಯಾಗುತ್ತವೆ. ಈ ಚಿತ್ರಗಳ ಮೂಲಕ ವಿದ್ಯಾರ್ಥಿಗಳು ಸುಲಭದಲ್ಲಿ ಪಾಠವನ್ನು ಜ್ಞಾಪಕ ಮಾಡಿಕೊಳ್ಳಬಹುದು’ ಎಂದು ಅವರು ಹೇಳುತ್ತಾರೆ.

ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪದವಿ ಅಧ್ಯಯನ ಮಾಡುತ್ತಿರುವ ಆದಿ ಸ್ವರೂಪ, ಬಿಎ ಮನಃಶಾಸ್ತ್ರ, ಪತ್ರಿಕೋದ್ಯಮ ವಿಷಯ ಆಯ್ಕೆ ಮಾಡಿಕೊಂಡಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65